ಕರ್ನಾಟಕ ಸರ್ಕಾರ

## ವಾಣಿಜ್ಯ ತೆರಿಗೆ ಇಲಾಖೆ

**ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ), ಹಾಸನ ರವರ ಕಛೇರಿ, ಸ್ವಾಮಿ ಆರ್ಕೇಡ್, ಹೆಚ್.ಡಿ.ಎಫ್.ಸಿ. ಹೋಂ ಲೋನ್ ಬ್ಯಾಂಕ್ ಎದರು, ಕುವೆಂಪುನಗರ, ಹಾಸನ–573 201,**

**ದೂರವಾಣಿ ಸಂ:08172–234428,** ಇ–ಮೇಲ್: accthsnenf@gmail.com

---

ಕ್ರ.ಸಂ.ವಾತೆಸಆ(ಜಾರಿ)/ಹಾಸನ/ಟಿ– 46 /2023–24. ದಿನಾಂಕ: 07/07/2023.

Office of the Additional Commissioner of Commercial Taxes
11 JUL 2023
413
ADCOM Bengaluru (e-Governance)

ಇವರಿಗೆ,

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಜಾರಿ), ಮಲೆನಾಡು ವಿಭಾಗ,
ಶಿವಮೊಗ್ಗ.

ಮಾನ್ಯರೇ,

**ವಿಷಯ:–** ಸರಕು ಮತ್ತು ಸೇವಾ ತೆರಿಗೆಗಳ ಕಾಯ್ದೆ–2017, ಕಲಂ–130 ರ ಅಡಿ ಮುಟ್ಟುಗೋಲು ಹಾಕಿಕೊಂಡಿರುವ ಸಿ.ಐ ಸ್ಕ್ರಾಪ್ ಅನ್ನು ವಿಲೇವಾರಿ ಮಾಡುವ ಸಂಬಂಧ ಸಾರ್ವಜನಿಕ ಹರಾಜು ಪ್ರಕಟಣೆ ನೀಡಿರುವ ಕುರಿತು.

**ಉಲ್ಲೇಖ:–** ಈ ಕಛೇರಿ ಪತ್ರ ಸಂಖ್ಯೆ: ವಾತೆಸಆ(ಜಾರಿ)/ಹಾಸನ/ಟಿ–45/2023–24, ದಿನಾಂಕ:07/07/2023.

*** *** ***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರಕು ಮತ್ತು ಸೇವಾ ತೆರಿಗೆಗಳ ಕಾಯ್ದೆ–2017, ಕಲಂ–130 ರ ಅಡಿ 24910 ಕೆಜಿ ಸಿ.ಐ ಸ್ಕ್ರಾಪ್ ಅನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಸೃಷ್ಟಿಯಾದ ತಗಾದೆಯ ದಂಡದ ಬಾಕಿ ಮೊತ್ತವನ್ನು ವಸೂಲು ಮಾಡುವ ಸಂಬಂಧ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸಾರ್ವಜನಿಕ ಹರಾಜು ಪ್ರಕಟಣೆಯನ್ನು ಒಂದು ರಾಜ್ಯ ದಿನಪತ್ರಿಕೆಯಲ್ಲಿ ರಾಜ್ಯ ವ್ಯಾಪ್ತಿ ಆವೃತ್ತಿಯಲ್ಲಿ ಪ್ರಕಟಿಸುವಂತೆ ಕೋರಿ ಪತ್ರ ಬರೆಯಲಾಗಿದೆ, ಸದರಿ ಮಾಹಿತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
(ಜಾರಿ), ಹಾಸನ.

ಅಡಕ:–

ಸಾರ್ವಜನಿಕ ಹರಾಜು ಪ್ರಕಟಣೆಯ ಪ್ರತಿ.

ಪ್ರತಿಯನ್ನು:–

1) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ) ಗಾಂಧಿನಗರ, ಬೆಂಗಳೂರು ಇವರಿಗೆ ಸೂಕ್ತ ಮಾಹಿತಿಯೊಂದಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

2) ಮಾನ್ಯ ವಾಣಿಜ್ಯ ತೆರಿಗೆಗಳ ಅಪರ–ಆಯುಕ್ತರು (e-governance) ವಿ.ಟಿ.ಕೆ. ಬಿಲ್ಡಿಂಗ್, ಬೆಂಗಳೂರು. ಇವರಿಗೆ ಸೂಕ್ತ ಮಾಹಿತಿಯೊಂದಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ ಹಾಗೂ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವಂತೆ ತಮ್ಮಲ್ಲಿ ಕೋರಲಾಗಿದೆ.

3) ಮಾನ್ಯ ವಾಣಿಜ್ಯ ತೆರಿಗೆಗಳ ಉಪ-ಆಯುಕ್ತರು (e-admn), ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಸೂಕ್ತ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

4) ಶ್ರೀ.ಮುದಷೀರ್ ಮಾಲೀಕರು ಮೆ॥ ಎಂ.ಎ.ಟ್ರೇಡರ್ಸ್, ನಂ.3208/10, ಎ2 ಎಂ6/ಎ2 3208/10 ಬಿ 2ಬಿ, ಟಿ ಮಿಲ್ ರೋಡ್, ಮಂಡಿ ಮೊಹಲ್ಲಾ, ಮೈಸೂರು-570021 ಇವರಿಗೆ.

5) ಕಛೇರಿಯ ಸೂಚನಾ ಫಲಕಕ್ಕೆ.

6) ಕಛೇರಿ ಪ್ರತಿ.

ತಮ್ಮ ವಿಶ್ವಾಸಿ,

07/07/23

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
(ಜಾರಿ), ಹಾಸನ.

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
(ಜಾರಿ), ಹಾಸನ

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ), ಹಾಸನ ರವರ ಕಛೇರಿ, ಸ್ವಾಮಿ ಆರ್ಕೆಡ್, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಎದುರು, ಕುವೆಂಪುನಗರ, ಹಾಸನ-573 201, ದೂರವಾಣಿ ಸಂ:08172-234428, E-mail : accthsnenf@gmail.com

ಸಂಖ್ಯೆ:ವಾತೆಸಆ(ಜಾರಿ)/ಹಾಸನ/ಹರಾಜು/ಟಿ-45/2023-24 ದಿನಾಂಕ:07-07-2023.

## ಸಿ.ಐ.ಸ್ಕ್ರಾಪ್ ಸರಕಿನ ಹರಾಜು ಪ್ರಕಟಣೆ.

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ), ಹಾಸನ ಇವರು ದಿನಾಂಕ:01/04/2023 ರಂದು **24,910 ಕೆ.ಜಿ ಸಿ.ಐ.ಸ್ಕ್ರಾಪ್ (C.I.Scrap)** ಸರಕನ್ನು ಜಿಎಸ್‌ಟಿ ಕಾಯ್ದೆ 2017, ಕಲಂ-130 ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತ ರೂ.12,05,146=00 ನ್ನು ವಸೂಲಿ ಮಾಡುವ ಸಂಬಂಧವಾಗಿ, ಸರಕನ್ನು ಮಾತ್ರ "ಎಲ್ಲಿ ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ" ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಆಸಕ್ತಿವುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ ಲಕೋಟೆಯನ್ನು **ದಿನಾಂಕ: 21/07/2023 ರಂದು ಪೂರ್ವಾಹ್ನ:11-30 ರ** ಸಮಯಕ್ಕೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಶಿವಮೊಗ್ಗ ಇವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿವುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ **ಬಿಡ್**ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

### : ಷರತ್ತುಗಳು ಮತ್ತು ನಿಬಂಧನೆಗಳು :

(1). ಮುಟ್ಟುಗೋಲು ಹಾಕಿಕೊಂಡಿರುವ ಸಿ.ಐ.ಸ್ಕ್ರಾಪ್ ಸರಕನ್ನು "ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಶಿವಮೊಗ್ಗ" ಇವರ ಕಛೇರಿಯ ಆವರಣದ ಕಾರ್ ಶೆಡ್‌ನಲ್ಲಿ ಸರಕನ್ನು ಇಟ್ಟಿದ್ದು, ಆಸಕ್ತಿವುಳ್ಳ ಖರೀದಿದಾರರು ದಿನಾಂಕ:14/07/2023 ರಂದು ಕಛೇರಿಯ ವೇಳೆಯಲ್ಲಿ (ಬೆಳಿಗ್ಗೆ:10-30 ರಿಂದ ಸಂಜೆ: 5-00 ರ ತನಕ) ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ. (2). ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಖರೀದಿದಾರರು ಅನುಬಂಧದಲ್ಲಿರುವ ಸರಕಿನ ಬಿಡ್‌ಗೆ ಭಾಗವಹಿಸಲು ಇಚ್ಛಿಸಿದಲ್ಲಿ ರೂ.1,00,000/-(ರೂಪಾಯಿ ಒಂದು ಲಕ್ಷ ಮಾತ್ರ), ಮೌಲ್ಯದ ಡಿ.ಡಿ. ಮೊತ್ತವನ್ನು 'Assistant Commissioner of Commercial Taxes, (Enforcement), Hassan" ಇವರ ಹೆಸರಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. (3). ತದನಂತರ ಆಸಕ್ತಿವುಳ್ಳ ಖರೀದಿದಾರರು (ಕಡ್ಡಾಯವಾಗಿ ಜಿ.ಎಸ್.ಟಿ ಕಾಯ್ದೆ ಅಡಿ ನೊಂದಾಯಿತರಾಗಿರಬೇಕು) ಸೀಲು ಮಾಡಿದ ಬಿಡ್ ಲಕೋಟೆ ಜೊತಗೆ ಡಿ.ಡಿ.ಯನ್ನು ನೋಂದಣಿ ಅಂಚೆ ಅಥವಾ ವೈಯಕ್ತಿವಾಗಿ ದಿನಾಂಕ:17/07/2023 ರ ಸಾಯಂಕಾಲ 5-00 ಘಂಟೆಯ ಒಳಗಾಗಿ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪೋಸ್ಟಲ್ ವಿಳಂಬಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ. (4). ಬಿಡ್ ಮೊತ್ತವನ್ನು ಸರಕಿಗೆ ಪ್ರತಿ ರೂಪಾಯಿ ಲೆಕ್ಕದಲ್ಲಿ ನೀಡುವುದು ಹಾಗೂ ಸರಕಿಗೆ ಷೆಡ್ಯೂಲ್ ಅನ್ವಯ, ಅನ್ವಯಿಸುವ ದರದಲ್ಲಿ ಜಿ.ಎಸ್.ಟಿ. ತೆರಿಗೆ ಪ್ರತ್ಯೇಕವಾಗಿರುತ್ತದೆ. (5). ಕಾರಣಾಂತರಗಳಿಂದ ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿ ಹೊಂದಿರುತ್ತಾರೆ. (6). ಯಶಸ್ವಿಯಾದ ಬಿಡ್ಡುದಾರರು ಬಿಡ್ ಮೊತ್ತವನ್ನು 07 (ಏಳು) ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ-ಪಾವತಿ ಮುಖಾಂತರ ಜಿ.ಎಸ್.ಟಿ. ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಅ-ನೊಂದಾಯಿತ ಖರೀದಿಯೆಂದು ಪರಿಗಣಿಸಬೇಕು. (7). ನಿಗದಿತ 07 (ಏಳು) ದಿನಗಳೊಳಗಾಗಿ ಪೂರ್ತಿ ಬಿಡ್ ಮೊತ್ತವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (8). ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು. (9). ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಸಹಿ/-

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು

(ಜಾರಿ), ಹಾಸನ